SRI MOHAMMED ALI.....Madam Speaker, the question is so vague. It is difficult to reply.

1.30 P.M.

‡*Construction of a Bridge Across Bijjur Halla*

296. SRI V.V. Wai (Shirahatti).....Will the Minister for Public Works be pleased to state :....

(*a*) whether it has come to the notice of the Government that the Public Works Department Bellatti-Halagi bridge road in Gadag-*R*anebennur, Haveri, Kancharaghatti connects Bellary district throvgh Tungabhadra bridge,

(*b*) if so, whether government intends to take repair work of this road,

(*c*) whether government would take up the construction work of a bridge on this road across Bijjur halla ?

SRI H.M. CHANNABASAPPA (Minister for Public Works):

(*a*) Yes
(*b*) Will be examined
(*c*) Will be examined

ಶ್ರೀ ವಿ. ವಿ. ವಾಯ್.—ಬೆಳ್ಳಟ್ಟಿ ಹಾಲಗಿ ಬ್ರಿಡ್ಜ್‌ನ್ನು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿದ್ದೀರಿ ಇದರಿಂದ ಸಂಪರ್ಕ ರಸ್ತೆ ಯಾಗದೇ ಉಳಿದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

‡ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲೆಲ್ಲಿ ಸೇತುವೆಗಳನ್ನು ಕಟ್ಟಿದೆ ಎಂಬುದು ನಮ್ಮ ಗಮನಕ್ಕೆ ಬಾರದೇ ಇರುತ್ತದೆಯೇ ?

ಶ್ರೀ ವಿ. ವಿ. ವಾಯ್.—ಅದು ಸಂಪರ್ಕ ರಸ್ತೆಯಾಗಿಲ್ಲ

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀವು ಕೇಳುತ್ತಾ ಇರತಕ್ಕಂಥದ್ದು ಬಿಜೂರು ನಾಲೆಗೆ ರಸ್ತೆ ಬೇಕು ಎಂದು ಅಲ್ಲವೇ ?

ಶ್ರೀ ವಿ. ವಿ. ವಾಯ್.—ಬೆಳ್ಳಟ್ಟಿ ಹಾಲಗಿ ಬ್ರಿಡ್ಜ್ ನಿಂದ ರಾಣಿಬೆನ್ನೂರು, ಹಾವೇರಿ ಮುಂತಾದ ಜಾಗಗಳಿಗೆ ಹೋಗಲು ಸಮರ್ಪಕ ರಸ್ತೆ ಇದೆ. ಆದೇ ಬಿಜ್ಜೂರು ಮುಂದೆ ದೊಡ್ಡ ಹಳ್ಳವಿದೆ, ಅದಕ್ಕೆ ಒಂದು ಸೇತುವೆ ಕಟ್ಟಿಸಿ ಸಂಪರ್ಕವನ್ನು ಕಲ್ಪಿಸಿ ಕೊಡುತ್ತೀರಾ ಎಂದು ?

ಶ್ರೀ ಎಚ್. ಎಂ. ಚನ್ನಬಸಪ್ಪ —ಬಿಜ್ಜೂರು ಹಳ್ಳ ಇದು ಪಿ ಡಬ್ಲ್ಯು.ಡಿ. ಗೆ ಸೇರಿದ ರಸ್ತೆಯಲ್ಲ ಎರಡನೆಯದು ಬಾಳೆ ಹೊಸೂರು ರೂರಲ್ ಕಮ್ಯುನೀಕೇಷನ್ ರಸ್ತೆ ಇದು ಪಿ ಡಬ್ಲ್ಯು.ಡಿ. ರಸ್ತೆಯಲ್ಲದೇ ಇದ್ದುದರಿಂದ ಬೇರೆ ವ್ಯವಹಾರದಲ್ಲಿ ಸಾಧ್ಯಸಾಧ್ಯತೆಗಳ ಬಗ್ಗೆ ಯೋಚನೆ ಮಾಡಬೇಕು. ಬಿಜ್ಜೂರು ನಾಲೆ ಇದು 400 ಅಡಿ ಉದ್ದವಿದೆ, ಇದಕ್ಕೆ 10 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ರೂರಲ್ ಕಮ್ಯುನೀಕೇಷನ್ನಿಂದ ಖರ್ಚುಮಾಡಿ ಒಂದು ಸಂಪರ್ಕ ರಸ್ತೆಯನ್ನು ಕೊಡುವುದಾದರೆ, ಅದಕ್ಕೆ ಸಾಕಷ್ಟು ಪ್ರಾಮುಖ್ಯತೆ ಇರುವುದಾದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಿ. ವಿ ವಾಯ್.—ಅದನ್ನು ಪಿ.ಡಬ್ಲ್ಯು.ಡಿ.ಗೆ ಪರಿವರ್ತಿಸಿಕೊಂಡು ಮಾಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಪರಿವರ್ತನೆ ಮಾಡುವುದಾದರೆ ಕೆಲವು ವಿಧೇಯಕಗಳು ಉಂಟು ಅದನ್ನು ನಿಮಗೂ ಕಳುಹಿಸಿಕೊಟ್ಟಿದ್ದೇನೆ. ಆ ಚೌಕಟ್ಟಿನಲ್ಲಿ ಬಂದರೆ ಅದನ್ನು ವಿಚಾರ ಮಾಡೋಣ.

**Mavinkere Aqueduct of Hemavathi Left Bank Canal*

317. SRI H. D. DEVE GOWDA (Holenarasipur)—

Will the Chief Minister be pleased to state :—

(*a*) when the work of Mavinkere Aqueduct on the Hemavathi Left Bank Channel was sanctioned ;

(*b*) the sanctioned outlay ;

(*c*) whether any agency has been fixed for the execution of the said work after calling for tenders ;